ವಿಶ್ವವಾಣಿ
04.03.2024 .ಸೋಮವಾರ
vishwavani.news

# ಸಾಮಾಜಿಕ ತಾಣ ಪಯಣ

## ಚೆಲುವ ಕುವರಿ (ತಲ ಷಟ್ಪದಿ)

ಒಲವಿನಲ್ಲಿ
ಚೆಲುವ ತೋರಿ
ನುಲಿದು ಬಳಿಗೆ ಬಂದೆಯಾ
ಅಲೆವ ಮನದಿ
ನಲಿವ ಹೃದಯ
ನಿಲುವ ಬಯಸಿ ನಿಂದೆಯಾ

ಮಲ್ಲೆ ಮುಡಿದು
ನಲ್ಲನನ್ನು
ಗೆಲ್ಲುತಿರುವೆಯೇತಕೆ
ಗಲ್ಲ ಹಿಡಿದು
ಮೆಲ್ಲ ನುಡಿದು
ಲಲ್ಲೆ ಹೊಡೆವೆಯೇತಕೆ

ಒನಪು ಧರಿಸಿ
ಕನಸು ಕದ್ದು
ಮನಸಿನಲ್ಲಿ ಮೂಡಿದೆ
ಇನಿಯಳಾಗಿ
ಸನಿಹ ಬರದೆ
ಮುನಿಸಿನಲ್ಲಿ ಕೂಡಿದೆ

ಒಸಗೆ ಕೊಟ್ಟು
ಬೆಸುಗೆ ಬೆಸೆದು
ನಸುನಗುತಲಿ ಕೊರೆದೆಯಾ
ಉಸಿರಿನಲ್ಲಿ
ಜಸವ ಕೊಟ್ಟು
ಹುಸಿಯ ನುಡಿದು ಹೋದೆಯಾ

ಕಂಗಳಲ್ಲಿ
ರಂಗು ಚೆಲ್ಲಿ
ಮಂಗಳಾಂಗಿ ಚಂಚಲೆ
ಅಂಗ ಸವರೊ
ಭೃಂಗವಾಗಿ
ಗುಂಗು ಹಿಡಿಸೊ ಕೋಮಲೆ

• **ಶಂಕರಾನಂದ ಹೆಬ್ಬಾಳ**

## ಸಬಲೆಯರು

ದೂರದೂರಿಗೆ ಹೊರಟಿಲ್ಲ ನಾವು
ನಿತ್ಯವೂ ಪಯಣವೇ ನಮಗಿಲ್ಲಿ
ಹೊಟ್ಟೆ-ಬಟ್ಟೆಗೆ ಹೊಂದಿಸಲೇ ಬೇಕು
ಅನುಕಂಪ ಬೇಡ, ಅವಕಾಶ ಸಾಕು

ಅಬಲೆಯರಲ್ಲ ನಾವು ಸಬಲೆಯರು
ನ್ಯುಷ್ಟ ಕಷ್ಟಗಳ ನಮಗೇ ಬಿಡಿ
ಸಮಾಜ ಸೇವೆಯೆಂಬ ಸೋಗಿನಲ್ಲಿ
ಸುಮ್ಮನೇ ನಮ್ಮನ್ನುಕಾಡಬೇಡಿ.

ಜಂಜಡಕೆ ಬೇಸರಿಸಲು ನಮಗೆ ಸಮಯಿಲ್ಲ
ಹೇಗಾದರೂ ತುತ್ತಿನಚೀಲ
ತುಂಬಿಸಲೇಬೇಕಲ್ಲ!
ಮುಗ್ಗರಿಸದಂತೆ ಜೀವದ ಬಂಡಿಯ
ದಬ್ಬಲೇಬೇಕು
ಬದುಕು ಮೂರಾಬಟ್ಟೆ ಆಗದಂತೆ
ಕಾಪಾಡಬೇಕು.

ಹೊರಟಿಹೆವು ನಾವು ಹೊಸದಾರಿ ಹುಡುಕಿ
ಹೊಸ ಸೂರು, ಹೊಸ ಊರು
ಅಲ್ಲಿರುವುದಂತೆ
ಹೊಸಬದುಕು ಕಟ್ಟಿಕೊಳ್ಳಲು ಅಡ್ಡಿ ನಮಗಿಲ್ಲ
ಸಹೃದಯರು ನೀವು ಅವಕಾಶ ಕೊಡಬೇಕಲ್ಲ!

• **ಬೇದ್ರೆ, ಮಂಜುನಾಥ, ಮೈಸೂರು**

## ಹನಿ ಫನ್ನಿ

ತೋರಿಸಲು ಹೋದ ರೋಗಿಗೆ
ಹೊರಗೆ ಬರುವ ಚಿಂತಿ,
ಹೊರಗೆ ಕಾಯುವ ರೋಗಿಗೆ
ಒಳ ಹೋಗುವ ಭ್ರಾಂತಿ,
ಡಾಕ್ಟರಿಗೆ ಮಾತ್ರ
ಹಣದ ಕಂತೆ ಕಂತಿ!!

• **ಕಾಡಜ್ಜಿ ಮಂಜುನಾಥ**

## ಕಾರ್ಟೂನ್

**40 ವರ್ಷಗಳ ಬಳಿಕ ನಭಕ್ಕೆ ನೆಗೆಯಲು ಸಜ್ಜಾದ ಭಾರತೀಯ**



ಇದೇನು ದೊಡ್ಡ ವಿಷಯ ..ನಾವು ಕೂಡ ದಿನಾ ನಭಕ್ಕೆ ಹಾರುತ್ತೀವಲ್ಲ ..!!!

• **ಎಚ್.ಎಸ್. ವಿಶ್ವನಾಥ್**

## ಬೀಚಿ ಮಾತು

ಬಳಸಿದಂತೆಲ್ಲಾ
ಬೆಳೆಯುವ
ಅಕ್ಷಯಪಾತ್ರೆ
'ನಗು'

## ತರ್ಲೇ ತಿಮ್ಮ






ನಾಚಿ ನೀರಾದ ಹೆಣ್ಣಿನ ಕೆನ್ನೆಯಲ್ಲಿ ರಂಗೇರಿದಾಗ ಚಿತ್ರದಲ್ಲಿರುವವರು, ಅನಂತಿಕಾ

## ಮಾತಿನ ಚಾಟಿ

• **ಅರವಿಂದ.ಜಿ.ಜೋಷಿ, ಮೈಸೂರು**



ಆ ಊರಲ್ಲಿ ಆಗ ಚುನಾವಣೆ ಘೋಷಣೆ ಆಗಿತ್ತು. ಹೀಗಾಗಿ ಎಲ್ಲ ಪಕ್ಷಗಳ ರಾಜಕೀಯ ನೇತಾರರು ಬಿರುಸಿನ ಪ್ರಚಾರದಲ್ಲಿ ಭಾಗಿ ಆಗಿದ್ದರು. ಇಂತಹ ಸಂದರ್ಭದಲ್ಲಿ ಓರ್ವ ನೇತಾರ ಮತ ಯಾಚಿಸಲು ಒಬ್ಬ ವೃದ್ಧನ ಬಳಿ ಬಂದವ 'ನಮಸ್ಕಾರ ಅಜ್ಜಾ.. ನಾನು ಈರಣ್ಣ ಅಂತ. ಈ ಬಾರಿ ಎಲೆಕ್ಷನ್‌ಗೆ ನಿಂತಿದ್ದೇನೆ. ನೀವು ಗೆಲ್ಲಿಸಿ ಕೊಟ್ರೆ ಎಲ್ಲಾ ಸಮಸ್ಯೇನೂ ಬಗೆಹರಿಸ್ತೀನಿ' ಎಂದು ಭರವಸೆಯ ನದಿಯನ್ನೇ ಹರಿಸಿದ. ಕೊನೆಯಲ್ಲಿ ತನ್ನ ಜೇಬಿನಿಂದ ಒಂದು ಸಾವಿರ ರೂಪಾಯಿ ತೆಗೆದು ಆ ಅಜ್ಜನಿಗೆ, 'ಅಜ್ಜಾ.. ಮರೀ ಬೇಡಿ ಈ ಸಲ ಓಟು ನನಗೇ ಹಾಕಿ' ಎಂದು ಅದನ್ನು ಕೊಡಲು ಮುಂದಾದ. ಆ ವೃದ್ಧ 'ಮಗಾ, ನನಗೆ ಈ ಹಣಾ ಬ್ಯಾಡಾ.. ನಿನಗೆ ಓಟು ಬೇಕಿದ್ರೆ ನನಗೊಂದು ಕತ್ತೆ ಖರೀದಿಸಿ ಕೊಡು' ಎನ್ನುತ್ತಾನೆ. ಈ ನೇತಾರನಿಗೆ ಮತ ಬೇಕಿತ್ತು. ಹೀಗಾಗಿ ಮನದಲ್ಲಿ ಒಂದು ಕತ್ತೆ ತಾನೇ.. ಅದೇನು ಮಹಾ ಎಂದುಕೊಳ್ಳುತ್ತ ಕತ್ತೆ ಖರೀದಿಸಲು ಹೊರಟು ನಿಂತ.

ಆತನ ಅಂದಾಜಿನಲ್ಲಿ ಒಂದು ಕತ್ತೆ ಒಂದು ಸಾವಿರ ರೂಪಾಯಿಯಲ್ಲಿ ಸಿಕ್ಕೇ ಸಿಗುತ್ತೆ ಎನ್ನುತ್ತಾ ಕತ್ತೆ ಹುಡುಕಿಕೊಂಡು ಹೋದವನಿಗೆ ಎಷ್ಟು ತಿರುಗಿದರೂ ಎಲ್ಲೂ ಕಾಣಿಸಲಿಲ್ಲ. ಹಗಲು ಸರಿದು ಮುಸ್ಸಂಜೆ ಆಗುತ್ತ ಬಂದಾಗ ಒಂದು. ಗುಡಿಸಿಲಿನ ಬಳಿ ಕತ್ತೆ ಕಂಡು ಖುಷಿ ಪಡುತ್ತ, 'ಅದರ ಮಾಲೀಕನನ್ನು ಕೂಗಿ ಇದರ ಬೆಲೆ ಎಷ್ಟಾಗುತ್ತೆ ಎಂದು ಕತ್ತೆಯನ್ನು ತೋರಿಸಿ ಕೇಳಿದಾಗ ಅದರ ಮಾಲೀಕ ನನ್ನ ಬಳಿ ಇರೋ ಈ ಕತ್ತೆಗೆ ಇಪ್ಪತ್ತು ಸಾವಿರ ರೂಪಾಯಿ ಆಗುತ್ತೆ. ಅದಕ್ಕಿಂತ ಒಂದು ಪೈಸಾ ಕೂಡ ಕಡಿಮೆ ಆಗಲ್ಲ. ಬೇಕಿದ್ರೆ ತಗೊಳ್ಳಿ ಇಲ್ಲಾಂದ್ರೆ, ಹೊರಡಿ' ಎಂದು ನೇರವಾಗಿ ಹೇಳಿದ.

ಆಗ ಆ ನೇತಾರ ಬೇರೆ ಕಡೆಗೆ ಪ್ರಯತ್ನ ಮಾಡೋಣ ಎಂದು ಅಲ್ಲಿಂದ ಊರಿನ ಎಲ್ಲ ಗಲ್ಲಿ ಗಲ್ಲಿ ಸುತ್ತಿದರೂ ಆತನಿಗೆ ಕತ್ತೆ ಮಾತ್ರ ಸಿಗಲಿಲ್ಲ. ಆಗ ಬರಿ ಕೈಯಲ್ಲಿ ಮತ್ತೆ ಆ ವೃದ್ಧ ವ್ಯಕ್ತಿ ಬಳಿ ಬಂದವ, 'ಅಜ್ಜಾ.. ನಾನು ಅಂದಾಜಿಸಿದಂತೆ ಒಂದು ಸಾವಿರ ರೂಪಾಯಿ ಗೆ ಎಲ್ಲೂ ಕತ್ತೆ ಸಿಗಲಿಲ್ಲ. ಅಲ್ಲಿದ್ದ ಒಂದು ಕತ್ತೆಗೆ ಇಪ್ಪತ್ತು ಸಾವಿರಗಿಂತ ಕಡಿಮೆ ಇಲ್ಲ' ಎಂದ ಅದರ ಮಾಲೀಕ. 'ಹೀಗಾಗಿ ನಾನು ನಿಮಗೆ ಕತ್ತೆ ಕೊಡಲಾರೆ ಆದರೆ ಈ ಸಾವಿರ ರೂಪಾಯಿ ಕೊಡಬಲ್ಲೆ ಇಟ್ಕೊಳ್ಳಿ' ಎಂದು ಹೇಳಿದ.

ಆ ವೃದ್ಧ ವ್ಯಕ್ತಿ 'ಮಗಾ, ನನಗೆ ಇನ್ನಷ್ಟು ಅವಮಾನ ಮಾಡಬೇಡಾ. ಅಲ್ಲಾ ಯಕಶ್ಚಿತ್ ಒಂದು ಕತ್ತೆ ಬೆಲೆ ಇಪ್ಪತ್ತು ಸಾವಿರಗಿಂತ ಕಡಿಮೆಗೆ ಮಾರಲ್ಪಡಲ್ಲಾ ಎಂದ ಮೇಲೆ ನಾನು ಮನುಷ್ಯ ಬರೀ ಒಂದು ಸಾವಿರ ರೂಪಾಯಿಗೆ ಮಾರಲ್ಪಡುತ್ತೇನೆಯಾ?' ಯೋಚಿಸು ಎಂದು ಮಾತಿನ ಚಾಟಿ ಬೀಸಿದಾಗ ಆ ನೇತಾರ ಮಾತಿಲ್ಲದೇ ಅಲ್ಲಿಂದ ಜಾಗ ಖಾಲಿ ಮಾಡಿದ.

## ಬೇಸಿಗೆಯ ಮುಂಜಾನೆ ತಂಪಾದಾಗ!



• **ಶ್ರೀಲತಾ.ಪಿ**

ಬೆಳಗ್ಗೆ ಎದ್ದ ತಕ್ಷಣ ತೆಂಗಿನ ಮರ ನೋಡು ಎನ್ನುವುದು ಅಮ್ಮ ಕಲಿಸಿದ ಪಾಠ. ಬೆಳೆಯುತ್ತ ಈ ಮಾತು ಮರೆಯುವಲ್ಲಿ ಬೆಂಗಳೂರಿನದ್ದು ಪಾಲಿದೆ. ಪಿಜಿಯ ಕಿಟಕಿಯಿಂದ ಇನ್ನೊಂದು ಪಿಜಿ ಕಿಟಕಿ ಕಾಣುತ್ತೆ ವಿನಃ, ಮತ್ತೇನಿಲ್ಲ. ಆದರೆ ಕೊರೋನಾ, ಮತ್ತೆ ಅಮ್ಮ ಕಲಿಸಿದ ಕೆಲವು ಪಾಠಗಳತ್ತ ಮುಖ ಮಾಡುವಂತೆ ಮಾಡಿತ್ತು. ಆದರೂ, ತೆಂಗಿನ ಮರ ಇರುವ ಪಿಜಿ ಸಿಕ್ಕಿರಲಿಲ್ಲ.

ಅದೃಷ್ಟ ಎಂಬಂತೆ, ಕೆಲಸದ ಜಾಗ ಬದಲಾವಣೆ, ಪಿಜಿ ಬದಲಾವಣೆಗೆ ಸಹಾಯ ಮಾಡಿತು. ಹಾಗಾಗಿ ಎದ್ದ ಕೂಡಲೇ ಅವನನ್ನ(ಕಲ್ಪವೃಕ್ಷ) ನೋಡುವ ಭಾಗ್ಯ ಒಲಿದು ಬಂತು. ಅದೇಕೊ ಏನೋ, ಕಳೆದ ಒಂದು ವಾರದಿಂದ, ಮತ್ತೆ, ಅಮ್ಮನ ಪಾಠ ಮರೆಯುತ್ತಿದೆ. ಎದ್ದ ಕೂಡಲೇ, ಕಿಟಕಿ ಪರದೆ ತೆಗೆದಾಕ್ಷಣ, ಅವನನ್ನು ನೋಡುತ್ತಿದ್ದ ಕಣ್ಣು ಆಕೆಯ ಕಡೆ ವಾಲುತ್ತಿದೆ. ಅವಳು ನಸು ಪಿಂಕ್ ಬಣ್ಣದ ಹೂಗಳಿಂದ ತುಂಬಿ ಹೋಗಿದ್ದಾಳೆ, ಬೇಸಗೆ ಆಗಲೇ ಸುಡುತ್ತಿದೆ. ಆದರೆ ಆಕೆ ತನ್ನ ಸೊಬಗನ್ನು ಹೆಚ್ಚಿಸಿ ಸೂರ್ಯನನ್ನು ಒಲಿಸಲು ನೋಡುವಂತಿದೆ.

ಆಹಾ ಬೆಳಗ್ಗೆ, ಮಧ್ಯಾಹ್ನ ಸಂಜೆ, ಆಕೆಯನ್ನು ನೋಡುವ ತವಕ. ಆಫೀಸ್‌ನಿಂದ ಬರುವಾಗ ಆಕೆಯ ಪಾದದಲ್ಲೆ ಬರಬೇಕು. ಆಗ ಆಕೆ ಬೇಕೆಂಬಂತೆ ತನ್ನ ಅಭಿಮಾನಿಗೆ ಪುಷ್ಪ ವೃಷ್ಟಿ ಮಾಡುವುದಿದೆ. ಆಗ ಇನ್ನಷ್ಟು ಖುಶಿ ನನಗೆ. ಆದರೆ ಆಕೆಯ ಹೆಸರು ತಿಳಿದುಕೊಳ್ಳುವ ಸಂದರ್ಭ ಅಥವಾ ಕುತೂಹಲ ಯಾಕೋ ಹುಟ್ಟಿರಲಿಲ್ಲ. ಮೇಯಲ್ಲಿ ಅರಳುವ ಹೂವಂತೆ ಫೆಬ್ರವರಿ ಹೂವು ಅಂದುಕೊಂಡಿದ್ದೆ.

ನಿನ್ನೆ ಬೆಳಗ್ಗೆ ಎಂದಿನಂತೆ ಲಾಪ್‌ಟಾಪ್ ಹಿಡಿದು, ಕಿಟಕಿ ಪಕ್ಕ ಆಕೆಯನ್ನು ನೋಡಿ, ಪರದೆ ಮೇಲೆ ಕಣ್ಣು ಹಾಯಿಸಿದೆ. ಕೆಲಸದ ಈಮೇಲ್ ನೋಡೋ ಮೊದಲು ವಿಶ್ವವಾಣಿ ಇ ಪೇಪರ್ ನೋಡೊ ಅಭ್ಯಾಸ. ಎಲ್ಲರೂ ಮೊದಲ ಪುಟದಿಂದ ಆರಂಭಿಸಿದರೆ, ನನಗೇಕೊ, ಕೊನೆಯಿಂದ ಆರಂಭಿಸೋ ಛಾಳಿ. ನಾನು ಓದುವ ಬರಹಗಳು ಅಲ್ಲಿ ಜಾಸ್ತಿ ಇದೆ ಎನ್ನುವ ಕಾರಣಕ್ಕೋ ಏನೋ? ಓದುತ್ತ ಓದುತ್ತ 13 ಪುಟಕ್ಕೆ ಬರಲು, ನನಗೆ ಆಶ್ಚರ್ಯ,

ಪಿಂಕ್ ಸುಂದರಿ ಫೊಟೋ. ಅರ್ರೇ, ಅವಳೊಂದಿಗೆ ಅವಳ ಹೆಸರಿದೆ. ದೀಪಾ ಭಟ್ ಬರೆದ ಅಂಕಣದಿಂದ ಆಕೆ ಹೆಸರು ಹಾಗು ಅವಳ ಬಗ್ಗೆ ಇನ್ನಷ್ಟು ತಿಳಿಯಿತು. ಪಿಂಕ್ ಪಾಯಿ. ಹೆಸರೇ ಎಷ್ಟು ಮುದ್ದಾಗಿದೆ. ಅವಳ ಥರಹವೇ!

ಬೇಸಗೆಯಲ್ಲಿ ಬಾಡುವ ನಮಗೆಲ್ಲ, ಈ ಮರಗಳು ಮನಸ್ಸಿಗೆ ಉಲ್ಲಾಸ ಕೊಡುತ್ತವೆ. ಸೂರ್ಯನ ಬೇಗೆ ಜಾಸ್ತಿಯಾದರೂ, ತಮ್ಮ ವರ್ಚಸ್ಸನ್ನು ಒಂದಿಂಚು ಕಮ್ಮಿ ಮಾಡದೆ ಕಂಗೊಳಿಸುತ್ತಿವೆ. ಇತ್ತೀಚೆಗೆ ನಿಖಿಲ್ ಕಾಮತ್ 1000 ಹೂ ಮರಗಳನ್ನು ನೆಡುವ ತಮ್ಮ ಕಾರ್ಯದ ಬಗ್ಗೆ ಹೇಳಿದ್ದರು, ಆದಷ್ಟು ಬೇಗ ಈ ಯೋಜನೆ ಕಾರ್ಯರೂಪಕ್ಕೆ ಬರಲಿ ಹಾಗು ಇಂಥಹ ಪರಿಸರ ಸ್ನೇಹಿ ಯೋಜನೆಗಳನ್ನು, ಸರಕಾರವಲ್ಲದೆ ಇವರಂತಹ ಗಣ್ಯ ವ್ಯಕ್ತಿಗಳು ಮಾಡಲಿ ಅನ್ನುವ ಆಶಯ ನನ್ನದು.

# ವಿಟಾಕೀಸ್

## ಒಬ್ಬನೇ ಶಿವ ಒಬ್ಬನೇ ಯುವ

### ಹಾಡಿನಲ್ಲಿ ಮನಗೆದ್ದ ದೊಡ್ಮನೆ ಮೊಮ್ಮಗ



ದೊಡ್ಮನೆ ಮೊಮ್ಮಗ ಯುವ ರಾಜ್‌ಕುಮಾರ್ ಅಭಿನಯದ ಯುವ ಸಾಕಷ್ಟು ನಿರೀಕ್ಷೆ ಹೆಚ್ಚಿಸಿದೆ. ಪೋಸ್ಟರ್, ಟೀಸರ್ ಝಲಕ್ ನಲ್ಲಿಯೇ ಹೊಸ ಭರವಸೆ ಮೂಡಿಸಿದ್ದ ಯುವ ಹಾಡಿನ ಮೂಲಕ ಕಿಚ್ಚೆಬ್ಬಿಸಿದೆ. ಒಬ್ಬನೇ ಶಿವ.. ಒಬ್ಬನೇ ಯುವ.. ಎಂಬ ಲಿರಿಕಲ್ ಹಾಡು ಬಿಡುಗಡೆಯಾಗಿದ್ದು, ಸಿನಿಪ್ರಿಯರ ಮನಗೆದ್ದಿದೆ. ಚಾಮರಾಜನಗರದಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಹಾಡು ರಿಲೀಸ್ ಆಗಿದೆ. ಈ ಲಿರಿಕಲ್ ಸಾಂಗ್ ಬಿಡುಗಡೆಯಾದ ಕೆಲವೇ ಗಂಟೆಗಳಲ್ಲಿ ಒಂದು ಮಿಲಿಯನ್‌ಗೂ ಹೆಚ್ಚಿನ ವೀಕ್ಷಣೆ ಕಂಡಿದೆ. ಮಾಸ್ ಆಗಿ ಮೂಡಿಬಂದಿರುವ ಸಾಂಗ್‌ನಲ್ಲಿ ಯುವ ರಗಡ್ ಲುಕ್ ತಾಳಿದ್ದು ಸ್ಟೈಲಿಶ್ ಆಗಿ ಮಿಂಚಿದ್ದಾರೆ. ಭರ್ಜರಿ ಸ್ಟೆಪ್ಸ್ ಹಾಕಿ ಮನಗೆದ್ದಿದ್ದಾರೆ. ನಿರ್ದೇಶಕ ಸಂತೋಷ್ ಆನಂದ್ ರಾಮ್ ಅವರೇ ಸಾಹಿತ್ಯ ಬರೆದಿರುವ ಈ ಹಾಡಿಗೆ, ಅಜನೀಶ್ ಬಿ ಲೋಕನಾಥ್ ಸಂಗೀತ ಸಂಯೋಜಿಸಿದ್ದಾರೆ. ನಕಾಶ್ ಅಜೀಜ್, ಸಂತೋಷ್ ಆನಂದ್‌ರಾಮ್ ದನಿಯಲ್ಲಿ ಹಾಡು ಮೂಡಿಬಂದಿದೆ. ಶ್ರೀಶ ಕುದುವಳ್ಳಿ ಕ್ಯಾಮೆರಾ ಕಣ್ಣಲ್ಲಿ ದೃಶ್ಯಗಳನ್ನು ಅದ್ಭುತವಾಗಿ ಸೆರೆಹಿಡಿದಿದ್ದಾರೆ. ಈ ಹಾಡು ನೋಡುತ್ತಿದ್ದರೆ ಅಪ್ಪು ನೆನಪು ಕಾಡುತ್ತದೆ. ಯುವ ರಾಜ್ ಕುಮಾರ್‌ಗೆ ಜತೆಯಾಗಿ ಸಪ್ತಮಿ ಗೌಡ ಬಣ್ಣಹಚ್ಚಿದ್ದಾರೆ. ಸುಧಾರಣಿ, ಅಚ್ಯುತ್ ಕುಮಾರ್, ಕಿಶೋರ್ ಮುಂತಾದವರು ತಾರಾಬಳದಲ್ಲಿದ್ದಾರೆ. ಸಂತೋಷ್ ಆನಂದ್ ರಾಮ್ ನಿರ್ದೇಶನದ ಈ ಚಿತ್ರವನ್ನು ಹೋಂಬಾಳೆ ಫಿಲಂಸ್ ಪ್ರೊಡಕ್ಷನ್ಸ್‌ನಲ್ಲಿ ವಿಜಯ್ ಕಿರಗಂದೂರು ನಿರ್ಮಾಣ ಮಾಡಿದ್ದಾರೆ. ಅದ್ದೂರಿಯಾಗಿ ಮೂಡಿಬಂದಿರುವ ಯುವ ಇದೇ ತಿಂಗಳ 29 ರಂದು ವಿಶ್ವಾದ್ಯಂತ ರಿಲೀಸ್ ಆಗಲಿದೆ.

> **ನಮ್ಮ ಕುಟುಂಬದ ಸಿನಿಪಯಣ ಆರಂಭವಾಗಿದ್ದೇ ಚಾಮರಾಜನಗರದಲ್ಲಿ, ಹಾಗಾಗಿ ನನ್ನ ಮೊದಲ ಸಿನಿಮಾದ ಹಾಡನ್ನು ಇಲ್ಲಿಯೇ ರಿಲೀಸ್ ಮಾಡಿದ್ದೇವೆ. ತುಂಬಾ ಶ್ರದ್ಧೆ, ಪರಿಶ್ರಮದಿಂದ ಈ ಸಿನಿಮಾ ಮಾಡಿದ್ದೇವೆ. ತಪ್ಪುಗಳಿದ್ದರೆ ತಿದ್ದಿ.**
> **-ಯುವ ರಾಜ್‌ಕುಮಾರ್** ನಟ

## ಏಪ್ರಿಲ್‌ನಲ್ಲಿ ಶರಣ್ ಭೂ ಮಂತರ್



ಶರಣ್ ಗುರು ಶಿಷ್ಯರು ಗೆದ್ದ ಬಳಿಕ ಯಾವುದೇ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿಲ್ಲ. ಈಗ ಛೂ ಮಂತರ್ ಹೇಳುತ್ತ ತೆರೆಗೆ ಬರುತ್ತಿದ್ದಾರೆ. ತರುಣ್ ಸ್ಟುಡಿಯೋಸ್ ಲಾಂಛನದಲ್ಲಿ ಮಾನಸಾ ತರುಣ್ ಹಾಗೂ ತರುಣ್ ಶಿವಪ್ಪ ನಿರ್ಮಿಸಿರುವ, ಛೂ ಮಂತರ್ ಚಿತ್ರವನ್ನು ಕರ್ವ ಖ್ಯಾತಿಯ ನವನೀತ್ ನಿರ್ದೇಶಿಸಿದ್ದಾರೆ. ಛೂಮಂತರ್ ಕಾಮಿಡಿಯ ಜತೆಗೆ , ಹಾರರ್, ಸಸ್ಪೆನ್ಸ್ ಅಂಶಗಳನ್ನು ಒಳಗೊಂಡಿದೆ.

ಈ ಹಿಂದೆ ಬಂದಿರುವ ಹಾರಾರ್ ಚಿತ್ರಗಳಿಗಿಂತ ಸ್ವಲ್ಪ ವಿಭಿನ್ನವಾಗಿದೆ. ಮೇಕಿಂಗ್ ನೋಡಿದರೆ ಹಾಲಿವುಡ್ ಸಿನಿಮಾಗಳಂತೆ ಭಾಸವಾಗುತ್ತದೆ. ಶರಣ್ ಪಾತ್ರ ಕೂಡ ಈ ಹಿಂದಿನ ಚಿತ್ರಗಳಿಗಿಂತ ಭಿನ್ನ ರೀತಿಯಲ್ಲಿಯೇ ಇದೆ. ಚಿಕ್ಕಣ್ಣ ಕೂಡ ಪ್ರಮುಖ ಪಾತ್ರದಲ್ಲಿ ನಟಿಸಿದ್ದು, ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಮತ್ತೊಮ್ಮೆ ಒಂದೇ ಚಿತ್ರದಲ್ಲಿ ನಟಿಸಿದ್ದಾರೆ. ಮೇಘನಾ ಗಾಂವ್ಕರ್, ಅದಿತಿ ಪ್ರಭುದೇವ, ಪ್ರಭು ಮುಂಡ್ಕರ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಛೂ ಮಂತರ್ ಟ್ರೇಲರ್ ಸದ್ಯದಲ್ಲಿಯೇ ಬಿಡುಗಡೆಯಾಗಲಿದ್ದು, ಏಪ್ರಿಲ್ ಐದರಂದು ಚಿತ್ರ ಬಿಡುಗಡೆಯಾಗಲಿದೆ.

## ಸುನಾಮಿ ಎಬ್ಬಿಸಿದ ಕೋರ




ಸುನಾಮಿ ಕಿಟ್ಟಿ ನಾಯಕನಾಗಿ ನಟಿಸಿರುವ ಕೋರ ಚಿತ್ರದ ಬಾನಿನಿಂದ... ಹಾಡು ಬಿಡುಗಡೆಯಾಗಿದೆ. ಗೊಲ್ಲಹಳ್ಳಿ ಶಿವಪ್ರಸಾದ್ ಸಾಹಿತ್ಯದ ಹಾಡಿಗೆ ರವೀಂದ್ರ ಸೊರಗಾವಿ ದನಿಯಾಗಿದ್ದಾರೆ. ಬಿ.ಆರ್. ಹೇಮಂತ್ ಕುಮಾರ್ ಗೀತೆಗೆ ಸಂಗೀತ ಸಂಯೋಜಿಸಿದ್ದಾರೆ. ಸುನಾಮಿ ಕಿಟ್ಟಿ ಈ ಚಿತ್ರದ ಮೂಲಕ ನಾಯಕನಾಗಿ ಚಿತ್ರರಂಗ ಪ್ರವೇಶಿಸುತ್ತಿದ್ದಾರೆ. ಚರಿಷ್ಮಾ ಚಿತ್ರದ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ನಿರ್ಮಾಪಕ ಪಿ.ಮೂರ್ತಿ ಖಳನಾಯಕನಾಗಿ ಅಭಿನಯಿಸಿದ್ದಾರೆ. ರಿಯಾಲಿಟಿ ಶೋ ಮೂಲಕ ಪರಿಚಿತನಾದ ನನಗೆ ಕರುನಾಡ ಜನತೆ ನೀಡಿರುವ ಪ್ರೀತಿ ಅಪಾರ. ಅದೇ ಪ್ರೀತಿ ಈಗಲೂ ಮುಂದುವರಿಯಲಿ ಎಂದು ಸುನಾಮಿ ಕಿಟ್ಟಿ ತಿಳಿಸಿದರು. ಎಂ.ಕೆ.ಮಠ, ಮುನಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಹೇಮಂತ್ ಕುಮಾರ್ ಸಂಗೀತ ನಿರ್ದೇಶನ, ಸೆಲ್ವಂ ಛಾಯಾಗ್ರಹಣ ಈ ಚಿತ್ರಕ್ಕಿದೆ. ಗೊಲ್ಲಹಳ್ಳಿ ಶಿವಪ್ರಸಾದ್, ಸಾಹಿತ್ಯ ರಚಿಸಿದ್ದು, ರವೀಂದ್ರ ಸೊರಗಾವಿ ಚಿತ್ರದ ಹಾಡುಗಳಿಗೆ ದನಿಯಾಗಿದ್ದಾರೆ. ರತ್ನಮ್ಮ ಮೂವೀಸ್ ಲಾಂಛನದಲ್ಲಿ ಪಿ.ಮೂರ್ತಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಒರಟ ಶ್ರೀ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

> **ಕೋರ ಎಂದರೆ ಬುಡಕಟ್ಟು ಜನಾಂಗದ ಹೆಸರು, ಅಲ್ಲಿನ ನಾಯಕನ ಸುತ್ತ ಚಿತ್ರದ ಕಥೆ ಸಾಗುತ್ತದೆ. ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ಏಪ್ರಿಲ್‌ನಲ್ಲಿ ಸಿನಿಮಾ ತೆರೆಗೆ ತರಲಿದ್ದೇವೆ. ಬಾನಿನಿಂದ.. ಹಾಡು ಎಲ್ಲರ ಮನಸ್ಸಿಗೂ ಹತ್ತಿರವಾಗುತ್ತದೆ.**
> **-ಪಿ.ಮೂರ್ತಿ** ನಿರ್ಮಾಪಕ

> **ಕೋರ ಆ್ಯಕ್ಷನ್ ಜತೆಗೆ ಸೆಂಟಿಮೆಂಟ್ ಅಂಶಗಳು ಬೆರೆತಿದ್ದು, ಕಮರ್ಷಿಯಲ್ ಚೌಕಟ್ಟಿನಲ್ಲಿ ಕಟ್ಟಿಕೊಡಲಾಗಿದೆ. ಪ್ರೇಕ್ಷಕರಿಗೆ ಬೇಕಾದ ಎಲ್ಲಾ ಮನರಂಜನಾತ್ಮಕ ಅಂಶಗಳು ಈ ಚಿತ್ರದಲ್ಲಿವೆ. ಈ ಚಿತ್ರವನ್ನು ನಿರ್ದೇಶಿಸಿದ್ದು ಸಂತಸ ತಂದಿದೆ.**
> **-ಒರಟ ಶ್ರೀ** ನಿರ್ದೇಶಕ



## ಪರವಶನಾದ ರವಿಮಾಮ



ಕ್ರೇಜಿಸ್ಟಾರ್ ರವಿಚಂದ್ರನ್ ಅಭಿನಯದ ಹೊಸ ಚಿತ್ರದ ಚಿತ್ರೀಕರಣ ಸದ್ದಿಲ್ಲದೆ ಮುಕ್ತಾಯವಾಗಿದೆ. ಸದ್ಯ ಚಿತ್ರದ ಶೀರ್ಷಿಕೆ ಹಾಗೂ ಪೋಸ್ಟರ್ ಬಿಡುಗಡೆಯಾಗಿದ್ದು, ಪರವಶ ಟೈಟಲ್‌ನಲ್ಲಿ ಚಿತ್ರ ತೆರೆಗೆ ಬರಲಿದೆ. ಅವ್ಯಕ್ತ ಸಿನಿಮಾಸ್ ಲಾಂಛನದಲ್ಲಿ ಹರೀಶ್ ಗೌಡ ನಿರ್ಮಿಸುತ್ತಿರುವ ಈ ಚಿತ್ರವನ್ನು ಸುಧೀಂದ್ರ ನಾಡಿಗರ್ ನಿರ್ದೇಶಿಸುತ್ತಿದ್ದಾರೆ. ವಿಭಿನ್ನ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಈಗಾಗಲೇ ನಲವತ್ತು ದಿನಗಳ ಚಿತ್ರೀಕರಣ ಮುಕ್ತಾಯವಾಗಿದೆ. ಕೆಲವು ದಿನಗಳ ಚಿತ್ರೀಕರಣ ಮಾತ್ರ ಬಾಕಿಯಿದೆ. ಮಂಗಳೂರು, ಉಡುಪಿ, ಮಣಿಪಾಲ ಹಾಗೂ ಕುಂದಾಪುರದಲ್ಲಿ ಚಿತ್ರೀಕರಣವಾಗಿದೆ. ರವಿಚಂದ್ರನ್, ರಘು ಭಟ್, ಸೋನಾಲ್ ಮೊಂತೆರೊ, ಪವಿತ್ರ ಲೋಕೇಶ್, ರಾಜೇಶ್ ನಟರಂಗ, ಸುಜಯ್ ಶಾಸ್ತ್ರಿ, ಅನನ್ಯಾ ಮುಂತಾದವರು ತಾರಾಬಳಗದಲ್ಲಿದ್ದಾರೆ. ರಘು ಭಟ್ ಪರವಶ ಚಿತ್ರಕ್ಕೆ ಕಥೆ ಬರೆದಿದ್ದಾರೆ. ಸಚಿನ್ ಬಸ್ರೂರ್ ಸಂಗೀತ ನಿರ್ದೇಶನ, ಆನಂದ್ ಮೀನಾಕ್ಷಿ ಛಾಯಾಗ್ರಹಣ ಹಾಗೂ ಪ್ರತೀಕ್ ಶೆಟ್ಟಿ ಸಂಕಲನವಿರುವ ಈ ಚಿತ್ರದ ಹಾಡುಗಳನ್ನು ಪ್ರಮೋದ್ ಮರವಂತೆ ರಚಿಸಿದ್ದಾರೆ. ರಘು ನಿಡವಳ್ಳಿ ಸಂಭಾಷಣೆ ರಚಿಸಿದ್ದಾರೆ.

> **ಇದು ಹೊಸ ತಂಡವಾದರೂ ಅವರ ಕ್ರಿಯಾಶೀಲತೆ ಕಂಡು ಖುಷಿಯಾಗಿದೆ. ಕಥೆಯಲ್ಲಿಯೂ ಹೊಸತನವಿದೆ. ಈ ಹಿಂದೆ ನಿರ್ವಹಿಸದ ಪಾತ್ರವನ್ನು ಈ ಚಿತ್ರದಲ್ಲಿ ಮಾಡಿದ್ದೇನೆ. ಪ್ರೇಕ್ಷಕರಿಗೆ ಬೇಕಾದ ಎಲ್ಲಾ ಅಂಶಗಳು ಚಿತ್ರದಲ್ಲಿವೆ. ನನ್ನ ಭಾಗದ ಚಿತ್ರೀಕರಣ ಮುಕ್ತಾಯವಾಗಿದೆ. ಈ ವರ್ಷದಲ್ಲಿಯೇ ಚಿತ್ರ ತೆರೆಗೆ ಬರಲಿದೆ.**
> **-ವಿ.ರವಿಚಂದ್ರನ್** ನಟ

